O.S. NO. 161/2023
DW – 3 .
Dated 30–06–2026.

ಸಾಕ್ಷಿಯನ್ನು ಈ ದಿನ ದಿನಾಂಕ 30–06–2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿಯರ ಪರವಾಗಿ ಶ್ರೀ ಆರ್ ಎಸ್ ಎಮ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಈಗ ನೊಡುತ್ತಿರುವ ನಿಡಿ – 11 ನನ್ನ ಜಮಿನಿನ ಪಹಣಿ ಪತ್ರಿಕೆ ಇರುತ್ತದೆ.

ಪಾಟೀ ಸವಾಲುಃ ವಾದಿಯರ ಪರವಾಗಿ ಶ್ರೀ ಎಮ್ ಎಸ್ ಎ ವಕೀಲರಿಂದಃ

ನನ್ನ ತಂದೆ ಹೆಸರು ಇಂದ್ರಪ್ಪ ಇರುತ್ತದೆ. ನನ್ನ ಅಜ್ಜನಿಗೆ ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನಮ್ಮ ಕುಟುಂಬಕ್ಕೆ ನಮ್ಮ ಪೂರ್ವಜರಿಂದ ಬಂದ ಆಸ್ತಿ ಒಂದು ಎಕರೆ ಮಾತ್ರ ಇದೆ ಎಂದರೆ ಸರಿ. ನಿಡಿ – 11 ರಲ್ಲಿ ಇರುವ ಆಸ್ತಿ ನಾನು ಮತ್ತು ನನ್ನ ತಂದೆ ಸ್ವಂತ ದುಡಿದು ಸಂಪಾದಿಸಿದ ಆಸ್ತಿ ಎಂದರೆ ನಿಜ. ನಿಡಿ – 11 ರಲ್ಲಿರುವ ಆಸ್ತಿ ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಉದ್ಯೋಗ ಒಕ್ಕಲುತನ ಎಂದರೆ ನಿಜ. ನಮ್ಮ ತಂದೆಗೆ ನಾವು 3 ಜನ ಗಂಡು ಮಕ್ಕಳು ಇರುತ್ತೇವೆ . ನಮ್ಮಲ್ಲಿ ಯಾರು ಸರ್ಕಾರಿ ನೌಕರಿ ಮಾಡುತ್ತಿಲ್ಲ. ನಮಗೆ ಇಬ್ಬರು ಸಹೋದರಿಯರು ಇರುತ್ತೇವೆ. ಸದರಿ ನಿಡಿ –

O.S. NO. 161/2023

DW – 3 .

Dated 30–06–2026.

11 ರ ಆಸ್ತಿಯಲ್ಲಿ ದುಡಿಮೆ ಮಾಡಿಕೊಂಡು ಉಪಜೀವನ ಮಾಡುತ್ತಿದ್ದೇವೆ ಎಂದರೆ ಸರಿ. ಸದರಿ ನಿಡಿ – 11 ಹೊರತು ಪಡಿಸಿ ಬೇರೆ ಆಸ್ತಿ ಉತಾರ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನಿಡಿ – 11 ರಲ್ಲಿ ಇರುವ ಜಮಿನಿಂದ ಮಾತ್ರ ನಮ್ಮ ಮನೆತನಕ್ಕೆ ಉತ್ಪನ್ನ ಇದ್ದು ಬೇರೆ ಯಾವುದೇ ಉತ್ಪನ್ನ ಇರುವುದಿಲ್ಲ ಎಂದರೆ ನಿಜ. ನನ್ನ ಹೆಸರಿನಲ್ಲಿ ಇದ್ದ ಉತಾರ ಹಾಜರು ಮಾಡಿದ್ದೀರಾ ಎಂದರೆ ಇಲ್ಲ. ನನ್ನ ಮತ್ತು ನನ್ನ ತಂದೆ ಮಧ್ಯೆ ವಾಟ್ನಿ ಆಗಿದೆಯಾ ಎಂದರೆ ಇಲ್ಲ. ನನ್ನ ಹೆಸರಿನಲ್ಲಿ ಯಾವುದು ಆಸ್ತಿ ಉತಾರ ಇರುವುದಿಲ್ಲ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ನನ್ನ ಹೆಸರಿನಲ್ಲಿ ಉತಾರ ಇದೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ವಾಟ್ನಿ ಮೂಲಕ ನನ್ನ ಹಿಸ್ಸೆಗೆ 4 ಎಕರೆ ಜಮಿನು ಪ್ರಾಪ್ತವಾಗಿರುತ್ತದೆ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ಪಾಲಿಗೆ ಬಂದ 4 ಎಕರೆ ಜಮಿನು 1 ನೇ ಪ್ರತಿವಾದಿಗೆ ಪಾಲಿನಿಂದ ಹಚ್ಚಿರುತ್ತೇನೆ. ಎಷ್ಟು ವರ್ಷ೦ದ ಹಚ್ಚಿದ್ದೀರಾ ಎಂದರೆ 30–35 ವರ್ಷ ದಿಂದ ಹಚ್ಚಿದ್ದೇನೆ ಎಂದು ನುಡಿದಿರುತ್ತಾರೆ. 30–35 ವರ್ಷಗಳ ಹಿಂದೆ ಸದರಿ ನಾನು ಹೇಳುತಿರುವ 4 ಎಕರೆ ಜಮಿನು ಉತಾರ ನನ್ನ ಹೆಸರಿನ್ಲಲಲ್ಲಿ ಇತ್ತಾ ಎಂದರೆ ಇಲ್ಲ. ನನಗೆ 35 ವರ್ಷಗಳ ಹಿಂದೆ ನನ್ನ ವಯಸ್ಸು ಕೇವಲ 10 ವರ್ಷ ವಯಸ್ಸು ಇತ್ತು, ಹೀಗಾಗಿ ನಾನು 1 ನೇ ಪ್ರತಿವಾದಿಗೆ 35 ವರ್ಷಗಳ ಹಿಂದೆ ಪಾಲಿನಿಂದ ಹಚ್ಚಿದ್ದೆ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಬರೆದಿರುವ ಸಂಗತಿಗಳು ಓದಿದ್ದೀರಾ ಎಂದರೆ ನನಗೆ

ಓದಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ನಾನು ಅದರಲ್ಲಿ 3 ಅಕ್ಷರಗಳ ಸಹಿ ಮಾಡಿರುತ್ತೇನೆ. ಸದರಿ 3 ಅಕ್ಷರ ಹೊರತು ಪಡಿಸಿ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ವಕೀಲರು ಸಹಿ ಮಾಡು ಎಂದಿದಕ್ಕೆ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿ ನನಗೆ ಓದಿ ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ನನ್ನ ಹೇಳಿಕೆ ಪ್ರಕಾರ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದಲ್ಲಿ 1 ನೇ ಪ್ರತಿವಾದಿಗೆ ರೂ. 30 ರಿಂದ 40 ಸಾವಿರ ಆದಾಯ ಬರುತ್ತಿತ್ತು ಎಂದು ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ. ಯಾವ ವರ್ಷ ಅವರಿಗೆ 30-40 ಸಾವಿರ ಆದಾಯ ಇತ್ತು ಎಂದರೆ ಅವರಿಗೆ ಹೊಲ ಮಾಡಿದಾಗಿನಿಂದ ಇತ್ತು ಎಂದು ನುಡಿದಿರುತ್ತಾರೆ. ನಾನು ಹೇಳುತಿರುವಂತೆ ನಮ್ಮ ಹೊಲವನ್ನು 1 ನೇ ಪ್ರತಿವಾದಿಗೆ ಪಾಲಿನಿಂದ ಯಾವತ್ತು ಹಚ್ಚಿರುವುದಿಲ್ಲ, ಹಚ್ಚಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ನನ್ನ ಹೊಲ ಪಾಲಿನಿಂದ ಹಚ್ಚಿದ್ದಕ್ಕೆ ಲಿಖಿತ ದಾಖಲೆ ಮಾಡಿಕೊಂಡಿದ್ದೀರಾ ಎಂದರೆ ಇಲ್ಲ. 1 ನೇ ಪ್ರತಿವಾದಿಗೆ ನಮ್ಮ ಹೊಲ ಹಚ್ಚುವಾಗ ನನಗೆ ವಯಸ್ಸು ಎಷ್ಟು ಇತ್ತು ಎಂದರೆ 10 ವರ್ಷ ವಯಸ್ಸು ಇದ್ದಿರಬಹುದು. ಆ ಸಮಯದಲ್ಲಿ ನನಗೆ ತಿಳುವಳಿಕೆ ಇತ್ತಾ ಎಂದರೆ ನನ್ನ ತಂದೆ ಹೊಲ ಹಚ್ಚಿದ ಬಗ್ಗೆ ಹೇಳುತ್ತಾ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು 1 ನೇ ಪ್ರತಿವಾದಿ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು 1 ನೇ ಪ್ರತಿವಾದಿಗೆ ನಮ್ಮ 8 ಎಕರೆ ಜಮಿನು ಪಾಲಿನಿಂದ ಹಚ್ಚಿದ್ದೇವೆ ಎನ್ನುವುದು ಸಂಪೂರ್ಣ ಸುಳ್ಳು ಇರುತ್ತದೆ ಎಂದರೆ

O.S. NO. 161/2023

DW – 3 .

Dated 30–06–2026.

ಸರಿಯಲ್ಲ. ಸದರಿ 8 ಎಕರೆ ಹೊಲದಿಂದ ಬಂದ ಉತ್ಪನ್ನದ್ದಿ ನಾಗಪ್ಪ 1 ನೇ ಪ್ರತಿವಾದಿ ಹೆಸರಿಗೆ ಹೊಲ ಖರೀದಿ ಮಾಡಿದನು ಎನ್ನುವುದು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಪ್ರಸ್ತುತ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ಸಮನ್ಸ ಬಂದಿರುವುದಿಲ್ಲ. ಈ ದಿನ ನನಗೆ ನ್ಯಾಯಾಲಯಕ್ಕೆ 1 ನೇ ಪ್ರತಿವಾದಿ ಕರೆದುಕೊಂಡು ಬಂದಿರುತ್ತನೆ ಎಂದರೆ ಇಲ್ಲ, ನಿನ್ನೆ ನನಗೆ ಅವರು ಪೊನ ಹಚ್ಚಿದ್ದರು ಎಂದು ನುಡಿದಿರುತ್ತಾರೆ. ನಾನು 1 ನೇ ಪ್ರತಿವಾದಿಯ ಹೇಳಿಕೆ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಯಾವುದೇ ಹೊಲ ಇದೇ ಇದ್ದರು ಸಹ ಇದೆ ಎಂದು ಖೊಟ್ಟಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಮಾತು ಕೇಳಿಕೊಂಡು ವಾದಿಯರಿಗೆ ಹೊಲ ಕೊಡಿಸಬಾರದು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 2 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 2 ನೇ ಪ್ರತಿವಾದಿ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರುವಿಚಾರಣೆ – ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಬೈಲಹೊಂಗಲ.